# Frequently Asked Questions

## ಪ್ರತಿಭಾಂತರಿಗೆ ಶುಲ್ಕ ಉಚಿತ

### 1. ಈ ಪುರಸ್ಕಾರವನ್ನು ಯಾರು ಅನುಷ್ಠಾನಗೊಳಿಸಿದ್ದಾರೆ?

ಕರ್ನಾಟಕ ಸರ್ಕಾರ 2006–07ನೇ ಶೈಕ್ಷಣಿಕ ಸಾಲಿನಿಂದ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ.

### 2. ಇದರ ಫಲಾನುಭವಿಗಳು ಯಾರು?

ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳ ವಿದ್ಯಾರ್ಥಿಗಳು. ಇವರುಗಳು ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ದ್ವಿತಿಯ ಪಿ.ಯು.ಸಿ ಅಧ್ಯಯನ ಮಾಡಿರಬೇಕು. ಪದವಿ ಪೂರ್ವ ಪರೀಕ್ಷೆಯಲ್ಲಿ ಶೇಕಡ 80%ಗಿಂತ ಹೆಚ್ಚು ಅಂಕಗಳನ್ನು ಗಳಿಸಿದ ಬಡತನದರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸೇರಿದ ಪ್ರತಿಜಿಲ್ಲೆಯಿಂದ ಹತ್ತು ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್, ವೈದ್ಯಕೀಯ ವೃತ್ತಿ ಮತ್ತು ದಂತ ವಿಜ್ಞಾನ, ಕೃಷಿ ಮತ್ತು ಪಶು ವೈದ್ಯ ವಿಜ್ಞಾನದಂತಹ ವೃತ್ತಿಪರ ಶಿಕ್ಷಣದ ಶುಲ್ಕಗಳನ್ನು ಸರ್ಕಾರ ನೀಡುತ್ತದೆ.

### 3. ವಿದ್ಯಾರ್ಥಿಗಳ ಆಯ್ಕೆಯನ್ನು ಯಾರು ಮಾಡುತ್ತಾರೆ? ವಿದ್ಯಾರ್ಥಿಗಳು ಅರ್ಜಿ ಹಾಕಬೇಕೆ?

ವಿದ್ಯಾರ್ಥಿಗಳು ನೇರವಾಗಿ ಅರ್ಜಿ ಹಾಕಕೂಡದು.

ಪದವಿ ಪೂರ್ವ ಶಿಕ್ಷಣ ಇಲಾಖೆ ಆ ವರ್ಷದಲ್ಲಿಅತಿ ಹಚ್ಚು ಅಂಕಗಳಿಸಿದ ಸುಮಾರು 300 ವಿದ್ಯಾರ್ಥಿಗಳ ಪಟ್ಟಿಯನ್ನು ಆಯಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ಕಳುಹಿಸುತ್ತದೆ.

ಈ ಜಿಲಾ ್ಲಉಪನಿರ್ದೇಶಕರು ಸಂಬಂಧ ಪಟ್ಟ ಕಾಲೇಜುಗಳಿಂದ ಪ್ರಾಂಶುಪಾಲರ ಸಹಕಾರದಿಂದ ಈ ವಿದ್ಯಾರ್ಥಿಗಳ ಅಗತ್ಯ ಮಾಹಿತಿಪಡೆದು ಜಿಲ್ಲಾ ಮಟ್ಟದ ಸಮಿತಿಯ ಅನುಮೋದನೆ ಪಡೆದು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಕಳುಹಿಸುತ್ತಾರೆ.

ಜಿಲ್ಲೆಗಳಿಂದ ಬಂದ ಕ್ರೋಡಿಕೃತ ಮಾಹಿತಿಯನ್ನುಕಾಲೇಜು ಶಿಕ್ಷಣ ನಿರ್ದೇಶನಾಲಯಕ್ಕೆ/ತಾಂತ್ರಿಕ ಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸುತ್ತದೆ. ಇವರು ವಿದ್ಯಾರ್ಥಿಗಳ ಪ್ರಸ್ತಾವನೆಯನ್ನು ಪರಿಶೀಲಿಸಿ ರಾಜ್ಯ ಮಟ್ಟದ ಸಮಿತಿಯ ಅನುಮೋದನೆಯೊಂದಿಗೆ ಅರ್ಹ ವಿದ್ಯಾರ್ಥಿಗಳಿಗೆ ಶುಲ್ಕವನ್ನು ಮರುಪಾವತಿಸಲು ಕ್ರಮ ಕೈಗೊಳ್ಳುತ್ತಾರೆ.